ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ನಗರಾಭಿವೃದ್ಧಿ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE 21/11/20

# ಸ್ಥಳೀಯ ಸಂಸ್ಥೆಗಳ ಮೀಸಲು ರಾಜಕೀಯ ಹಿತಾಸಕ್ತಿಗೆ ಬಲಿ

ರಾಜ್ಯದ 276 ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ರಾಜ್ಯ ಸರ್ಕಾರ ನಿಗದಿಪಡಿಸಿದ್ದ ಮೀಸಲು ಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿದೆ. ಅದರೊಂದಿಗೆ, ಇತ್ತೀಚೆಗಷ್ಟೇ ಈ ನಗರ ಸ್ಥಳೀಯ ಸಂಸ್ಥೆಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದ ಜನಪ್ರತಿನಿಧಿಗಳು ಅಧಿಕಾರ ಕಳೆದುಕೊಂಡಿದ್ದಾರೆ. ತಾಂತ್ರಿಕವಾಗಿ ಇನ್ನೂ 10 ದಿನ ಅವರಿಗೆ ಅಧಿಕಾರವಿದೆ. ಏಕೆಂದರೆ ಮೇಲ್ಮನವಿ ಸಲ್ಲಿಸಲು ಹೈಕೋರ್ಟ್ 10 ದಿನಗಳ ಕಾಲಾವಕಾಶ ನೀಡಿದೆ. ಇನ್ನು, ನಾಲ್ಕು ವಾರದೊಳಗೆ ರೋಸ್ಟರ್ (ಆವರ್ತನ) ಪದ್ಧತಿ ಪ್ರಕಾರ ಹೊಸತಾಗಿ ಮೀಸಲು ನಿಗದಿಪಡಿಸಿ ಆದೇಶ ಹೊರಡಿಸುವಂತೆ ಹೈಕೋರ್ಟ್ ಸೂಚಿಸಿದೆ. ಈಗ ಸಲ್ಲಿಕೆಯಾಗುವ ಮೇಲ್ಮನವಿ, ಸರ್ಕಾರ ಮತ್ತೆ ನಿಗದಿಪಡಿಸಲಿರುವ ಮೀಸಲು, ಅದನ್ನು ಮತ್ತೆ ಯಾವುದಾದರೂ ನಗರ ಸ್ಥಳೀಯ ಸಂಸ್ಥೆಯ ಸದಸ್ಯರು ಕೋರ್ಟ್‌ನಲ್ಲಿ ಪ್ರಶ್ನಿಸುವುದು... ಹೀಗೆ ಇದೇ ರಗಳೆ ಮುಂದುವರೆಯುವ ಸಾಧ್ಯತೆಯೇ ಹೆಚ್ಚಿದೆ. ವಿಚಿತ್ರವೆಂದರೆ, ಈ ನಗರ ಸ್ಥಳೀಯ ಸಂಸ್ಥೆಗಳಿಗೆ ಸಾರ್ವತ್ರಿಕ ಚುನಾವಣೆ ನಡೆದು ಎರಡು ವರ್ಷಗಳೇ ಕಳೆದಿವೆ. ಅಲ್ಲಿಂದ ಇಲ್ಲಿಯವರೆಗೂ ಮೀಸಲು ನಿಗದಿಯ ವಿವಾದ ಹೀಗೇ ಮುಂದುವರೆಯುತ್ತಾ ಬಂದಿದ್ದು, ನಗರ ಸ್ಥಳೀಯ ಸಂಸ್ಥೆಗಳಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ನೇಮಕವಾಗದೆ ಆಡಳಿತಾಧಿಕಾರಿಗಳೇ ದರ್ಬಾರು ನಡೆಸುತ್ತಿದ್ದರು. ತೀರಾ ಇತ್ತೀಚೆಗಷ್ಟೇ ಅಧ್ಯಕ್ಷ-ಉಪಾಧ್ಯಕ್ಷರು ಆಯ್ಕೆಯಾಗಿದ್ದರು. ಆದರೆ, ಅದೂ ಈಗ ರದ್ದುಗೊಂಡಿದೆ. ಸ್ಥಳೀಯ ಸಂಸ್ಥೆಗಳ ಅಧಿಕಾರಾವಧಿ ಐದು ವರ್ಷ. ಅದರಲ್ಲಿ ಎರಡು ವರ್ಷ ಈಗಾಗಲೇ ಮೀಸಲು ರಗಳೆಯಲ್ಲಿ ಕಳೆದಿದೆ. ಇನ್ನೂ ಅದು ಮುಗಿದಿಲ್ಲ. ಹೀಗಿರುವಾಗ ಸರಿಯಾಗಿ ಮೀಸಲು ನಿಗದಿಯಾಗಿ, ಅಧ್ಯಕ್ಷ-ಉಪಾಧ್ಯಕ್ಷರು ನೇಮಕಗೊಂಡು, ಪ್ರಜಾಸತ್ತಾತ್ಮಕವಾಗಿ ಈ ನಗರ ಸ್ಥಳೀಯ ಸಂಸ್ಥೆಗಳು ಆಡಳಿತ ನಡೆಸುವುದು ಯಾವಾಗ?

**ಈಗ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಮೀಸಲು ರದ್ದಾಗಿರುವ ಪೌರಾಡಳಿತ ಸಂಸ್ಥೆಗಳಿಗೆ ಸಾರ್ವತ್ರಿಕ ಚುನಾವಣೆ ನಡೆದು 2 ವರ್ಷಗಳಾದವು. ಅಂದಿನಿಂದಲೂ ಆಡಳಿತಾಧಿಕಾರಿಗಳೇ ದರ್ಬಾರು ನಡೆಸುತ್ತಿದ್ದಾರೆ.**

ಇದು ಈ ಅವಧಿಯಲ್ಲಿ ಮಾತ್ರ ಉಂಟಾಗಿರುವ ಸಮಸ್ಯೆ ಅಲ್ಲ. ಅಥವಾ ಇದು ನಗರ ಸ್ಥಳೀಯ ಸಂಸ್ಥೆಗಳಿಗೆ ಸೀಮಿತವಾದ ಸಮಸ್ಯೆಯೂ ಅಲ್ಲ. ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವಿಷಯದಲ್ಲೂ ಪ್ರತಿ ಬಾರಿ ಮೀಸಲು ನಿಗದಿಯ ವಿಚಾರ ಹೀಗೇ ವಿವಾದವಾಗುತ್ತದೆ. ಒಟ್ಟಿನಲ್ಲಿ ಇತ್ತೀಚಿನ ದಶಕದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ ನಿಗದಿಪಡಿಸುವ ಮೀಸಲು ಕೋರ್ಟ್‌ನಲ್ಲಿ ಪ್ರಶ್ನಿಸಲ್ಪಡದೆ ಸುರಳೀತವಾಗಿ ಮುಂದುವರೆದ ಉದಾಹರಣೆಯೇ ಇಲ್ಲ. ಒಮ್ಮೆ ಇದು ಕೋರ್ಟ್‌ಗೆ ಬಂದರೆ ಇತ್ಯರ್ಥವಾಗುವುದು ವರ್ಷಗಟ್ಟಲೆ ವಿಳಂಬವಾಗುತ್ತದೆ. ಅಲ್ಲಿಯವರೆಗೂ ಸ್ಥಳೀಯ ಸಂಸ್ಥೆಗಳ ಆಡಳಿತ ನೆನೆಗುದಿಗೆ ಬಿದ್ದಿರುತ್ತದೆ. ಪ್ರಜಾಪ್ರಭುತ್ವದಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತ ಬಹಳ ಮುಖ್ಯ. ಹಾಗೆಯೇ, ಸಮಾಜದ ಪ್ರತಿ ವರ್ಗಕ್ಕೂ ಅಧಿಕಾರ ಸಿಗಬೇಕು ಎಂಬ ಕಾರಣದಿಂದ ರೋಸ್ಟರ್ ಪದ್ಧತಿಯಲ್ಲಿ ಮೀಸಲು ನಿಗದಿಪಡಿಸುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಆದರೆ, ಈ ಮೀಸಲು ನಿಗದಿಯ ವ್ಯವಸ್ಥೆಯನ್ನು ಯಾವುದೇ ರಾಜಕೀಯ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿದ್ದರೂ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಯತ್ನಿಸುತ್ತದೆ. ಸಮಸ್ಯೆಯ ಮೂಲ ಅದೇ ಆಗಿದೆ. ವಿಚಿತ್ರವೆಂದರೆ ಸ್ಥಳೀಯ ಸಂಸ್ಥೆಗಳಿಗೆ ಸಾರ್ವತ್ರಿಕ ಚುನಾವಣೆ ಮುಗಿದ ನಂತರ ಸರ್ಕಾರ ಮೀಸಲು ನಿಗದಿಪಡಿಸುತ್ತದೆ. ಆಗ ಯಾವ ಸ್ಥಳೀಯ ಸಂಸ್ಥೆಯಲ್ಲಿ ತನಗೆ ಅಧಿಕಾರ ಹಿಡಿಯಲು ಹೇಗೆ ಅನುಕೂಲ ಮಾಡಿಕೊಳ್ಳಬೇಕೆಂಬುದಕ್ಕೇ ಹೆಚ್ಚಿನ ಗಮನ ನೀಡುತ್ತದೆ. ಹೀಗಾಗಿ ಮೀಸಲಾತಿಯ ಮೂಲ ಆಶಯ ಹಳ್ಳ ಹಿಡಿಯುತ್ತದೆ. ಅಧಿಕಾರಾರೂಢ ರಾಜಕೀಯ ಪಕ್ಷದ ಹಿತಾಸಕ್ತಿಯ ಕೈಯೇ ಮೇಲಾಗುತ್ತದೆ. ಎಲ್ಲ ರಾಜಕೀಯ ಪಕ್ಷಗಳೂ ತಾವು ಅಧಿಕಾರದಲ್ಲಿರುವಾಗ ಇದನ್ನೇ ಮಾಡುವುದರಿಂದ ವಿರೋಧ ಪಕ್ಷಗಳು ಇದನ್ನು ಜೋರಾಗಿ ವಿರೋಧಿಸುವುದಿಲ್ಲ. ಈ ಅವ್ಯವಸ್ಥೆ ಹೀಗೇ ಮುಂದುವರೆಯಲು ಏಕೆ ಬಿಡಬೇಕು?

ಸ್ಥಳೀಯ ಸಂಸ್ಥೆಗಳ ಆಡಳಿತ ಸುಗಮವಾಗಿ ನಡೆದು ಜನಸಾಮಾನ್ಯರಿಗೆ ತಮ್ಮ ಊರು ಹಾಗೂ ನಗರಗಳಲ್ಲಿ ಉತ್ತಮ ಸೌಕರ್ಯ ಮತ್ತು ಸರ್ಕಾರಿ ಸೇವೆಗಳು ಸಿಗಬೇಕು ಅಂದರೆ ಮೀಸಲು ನಿಗದಿಯಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶವಿರಬಾರದು. ರೋಸ್ಟರ್ ಪದ್ಧತಿಯನ್ನು ವೈಜ್ಞಾನಿಕವಾಗಿ ರೂಪಿಸಬೇಕು. ಇದಕ್ಕೆ ಸಂಬಂಧಿಸಿದ ಕಾಯ್ದೆ ಅಥವಾ ನಿಯಮದಲ್ಲಿ ಬದಲಾವಣೆ ತಂದು ಉತ್ತಮ ವ್ಯವಸ್ಥೆಯೊಂದನ್ನು ರೂಪಿಸಲು ರಾಜ್ಯ ಸರ್ಕಾರ ಗಂಭೀರವಾಗಿ ಯೋಚಿಸುವ ಅಗತ್ಯವಿದೆ.